# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಸಂಪರ್ಕ ವಿಭಾಗ, ನರಸಿಂಹರಾಜ ವೃತ್ತ, ಬೆಂಗಳೂರು-560 002**

***ಪತ್ರಿಕಾ ಪ್ರಕಟಣೆ*** **ದಿನಾಂಕ: 03.01.2012**

ಇತ್ತೀಚೆಗೆ ಮಾಧ್ಯಮಗಳಲ್ಲಿ ಮಲ್ಲೇಶ್ವರಂ ವಿಧಾನಸಭಾ ಕ್ಷೇತ್ರದ ಕಾಮಗಾರಿ ಅನುದಾನದ ಬಿಡುಗಡೆಯ ಬಗ್ಗೆ ವರದಿಗಳು ಬಂದಿರುವ ಹಿನ್ನೆಲೆಯಲ್ಲಿ ಸ್ಥಳೀಯ ಕ್ಷೇತ್ರದ 6 ಜನ ಪಾಲಿಕೆಯ ಸದಸ್ಯರುಗಳು ಜಂಟಿ ಆಯುಕ್ತರು (ಪಶ್ಚಿಮ) ರವರಿಗೆ ಪತ್ರ ಮುಖೇನ ಮನವಿಯನ್ನು ಸಲ್ಲಿಸಿ, ಈ ಹಿಂದೆ ಮಲ್ಲೇಶ್ವರಂ ವಿಭಾಗಕ್ಕೆ 7 ವಾರ್ಡ್‌ಗಳ ಜೊತೆಗೆ ಬೇರೆ ವಿಧಾನಸಭಾ ಕ್ಷೇತ್ರದ ವಾರ್ಡ್‌ಗಳು ಸಹ ಸೇರ್ಪಡೆಯಾಗಿದ್ದು, ಅವುಗಳಿಗೆ ಬಿಡುಗಡೆಯಾಗಿರುವ ಅನುದಾನದ ಮೊತ್ತವನ್ನು ಸೇರಿಸಿ ಮಲ್ಲೇಶ್ವರಂ ವಿಧಾನಸಭಾ ಕ್ಷೇತ್ರಕ್ಕೆ ಬಿಡುಗಡೆಯಾಗಿರುವುದಾಗಿ ಮಾಧ್ಯಮಗಳಲ್ಲಿ ತಪ್ಪಾಗಿ ಪ್ರಕಟವಾಗಿದೆ.

ಆದ್ದರಿಂದ ಮಲ್ಲೇಶ್ವರಂ ವಿಭಾಗವೇ ಬೇರೆ ಮತ್ತು ಮಲ್ಲೇಶ್ವರಂ ವಿಧಾನಸಭಾ ಕ್ಷೇತ್ರವೇ ಬೇರೆಯಾಗಿರುವುದಾಗಿ ತಿಳಿಸಿದ್ದು, ಈ ಹಿಂದೆ ಮಲ್ಲೇಶ್ವರಂ ಕ್ಷೇತ್ರಕ್ಕೆ ಬೇರೆ ವಿಧಾನಸಭಾ ಕ್ಷೇತ್ರದ ವಾರ್ಡ್‌ಗಳು ಸೇರ್ಪಡೆಯಾಗಿದ್ದರಿಂದ ಅವುಗಳಿಗೆ ಬಿಡುಗಡೆಯಾಗಿರುವ ಅನುದಾನದ ವಿವರಗಳು ಈ ಕೆಳಗಿನಂತಿವೆ.

***(ಏಪ್ರಿಲ್ 2008 ರಿಂದ ಸೆಪ್ಟೆಂಬರ್ 2011ರ ವರೆಗೆ)***

| ಕ್ರ.ಸಂ. | ವಿಧಾನಸಭಾ ಕ್ಷೇತ್ರದ ಹೆಸರು | ಒಟ್ಟು ವಾರ್ಡ್‌ಗಳ ಸಂಖ್ಯೆ | ಅನುದಾನ |
|---|---|---|---|
| 1. | ಮಲ್ಲೇಶ್ವರಂ | 7 ವಾರ್ಡ್‌ಗಳು | ರೂ.235 ಕೋಟಿ |
| 2. | ರಾಜರಾಜೇಶ್ವರಿನಗರ | 4 ವಾರ್ಡ್‌ಗಳು | ರೂ.211 ಕೋಟಿ |
| 3. | ಗಾಂಧಿನಗರ | 1 ವಾರ್ಡ್ | ರೂ.12 ಕೋಟಿ |
| 4. | ಹೆಬ್ಬಾಳ | 1 ವಾರ್ಡ್ | ರೂ.20 ಕೋಟಿ |

ಈ ಹಿನ್ನೆಲೆಯಲ್ಲಿ ಪ್ರಸ್ತುತ ಮಲ್ಲೇಶ್ವರಂ ವಿಧಾನಸಭಾ ಕ್ಷೇತ್ರ ಹಾಗೂ ಮಲ್ಲೇಶ್ವರಂ ವಿಭಾಗ ಎರಡು ಬೇರೆ ಬೇರೆಯಾಗಿರುವುದರಿಂದ ಮಲ್ಲೇಶ್ವರಂ ವಿಧಾನಸಭಾ ಕ್ಷೇತ್ರದ ಕಾಮಗಾರಿಗಳಿಗೆ ಬಿಡುಗಡೆಯಾಗಿರುವ ಅನುದಾನ ರೂ.235 ಕೋಟಿಗಳು ಎಂದು ಮಾತ್ರ ಪರಿಗಣಿಸಬೇಕೆಂದು ಹಾಗೂ ಸಾರ್ವಜನಿಕರ ಮಾಹಿತಿಗಾಗಿ ತಮ್ಮ ಪತ್ರಿಕೆಗಳಲ್ಲಿ ಪ್ರಕಟಿಸಬೇಕೆಂದು ಜಂಟಿ ಆಯುಕ್ತರು (ಪಶ್ಚಿಮ) ರವರು ಕೋರಿದ್ದಾರೆ.

**ಸಾರ್ವಜನಿಕ ಸಂಪರ್ಕಾಧಿಕಾರಿ**

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಸಂಪರ್ಕ ವಿಭಾಗ, ನರಸಿಂಹರಾಜ ವೃತ್ತ, ಬೆಂಗಳೂರು-560 002**

***ಪತ್ರಿಕಾ ಪ್ರಕಟಣೆ*** **ದಿನಾಂಕ: 03.01.2012**

## ***ಮುಂದುವರೆದ ಅನಧಿಕೃತ ಓಎಫ್‌ಸಿ ಕೇಬಲ್ ತೆರವು ಕಾರ್ಯ***

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಓಎಫ್‌ಸಿ ಸೇವಾ ಪೂರೈಕೆದಾರರಿಂದ ಅನಧಿಕೃತವಾಗಿ ಕೇಬಲ್ ಅಳವಡಿಸಿರುವುದನ್ನು ಪತ್ತೆ ಹಚ್ಚಿ ಅದನ್ನು ತೆರವುಗೊಳಿಸುವ ಕಾರ್ಯ ಇನ್ನೂ ತೀವ್ರಗೊಳಿಸಲಾಗಿದೆಂದು ಪಾಲಿಕೆ ಆಯುಕ್ತರಾದ ಶ್ರೀ ಎಂ.ಕೆ. ಶಂಕರಲಿಂಗೇಗೌಡ ರವರು ತಿಳಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಪಾಲಿಕೆಯ ಪಶ್ಚಿಮ, ಪೂರ್ವ ಮತ್ತು ಬೊಮ್ಮನಹಳ್ಳಿ ವಲಯಗಳಲ್ಲಿ ಓಎಫ್‌ಸಿ ಕೇಬಲ್‌ಗಳನ್ನು ತೆರವುಗೊಳಿಸುವ ಕಾರ್ಯ ಕೈಗೊಳ್ಳಲಾಯಿತು. ವಿವರಗಳು ಈ ಕೆಳಗಿನಂತಿದೆ.

| ವಲಯ | ದಿನಾಂಕ | ಕೇಬಲ್ ಕತ್ತರಿಸಿರುವ ಒಟ್ಟು ಉದ್ದ |
|---|---|---|
| ಪಶ್ಚಿಮ ವಲಯ | 02.01.2012<br>03.01.2012 | 4,450 ಮೀಟರ್ |
| ಪೂರ್ವ ವಲಯ | 30.12.2011<br>31.12.2011<br>02.01.2012 | 3,396 ಮೀಟರ್ |
| ಬೊಮ್ಮನಹಳ್ಳಿ ವಲಯ | 23.12.2011<br>ರಿಂದ<br>30.12.2011 | 12,820 ಮೀಟರ್ |
| ಒಟ್ಟು ಉದ್ದ | | 20,666 ಮೀಟರ್ |
| ದಿನಾಂಕ: 23.12.2011 ರಿಂದ 29.12.2011ರ ವರೆಗೆ ಒಟ್ಟು ಉದ್ದ | | 32,341 ಮೀಟರ್ |
| ಇದುವರೆವಿಗೂ ಕೇಬಲ್ ಕತ್ತರಿಸಿರುವ ಒಟ್ಟು ಉದ್ದ | | 53,007 ಮೀಟರ್ |

**ಸಾರ್ವಜನಿಕ ಸಂಪರ್ಕಾಧಿಕಾರಿ**

# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಸಾರ್ವಜನಿಕ ಸಂಪರ್ಕ ವಿಭಾಗ, ನರಸಿಂಹರಾಜ ವೃತ್ತ, ಬೆಂಗಳೂರು-560 002**

***ಪತ್ರಿಕಾ ಪ್ರಕಟಣೆ*** **ದಿನಾಂಕ: 03.01.2012**

## ***ಬಾಗಮನೆ ಟೆಕ್ ಪಾರ್ಕ್ ರವರು ಪಾಲಿಕೆಗೆ 10 ಕೋಟಿ ರೂ. ಆಸ್ತಿ ತೆರಿಗೆ ಪಾವತಿ***

ಒಂದು ಲಕ್ಷಕ್ಕೂ ಮೇಲ್ಪಟ್ಟು ಬಾಕಿ ಇರುವ ಎಲ್ಲಾ ಆಸ್ತಿಗಳ ಮಾಲೀಕರಿಗೆ ನೋಟಿಸ್ ಜಾರಿ ಮಾಡುವ ಮತ್ತು ಅಂತಹ ಕಟ್ಟಡಗಳ ಮುಂದೆ ತಮಟೆ ಹೊಡೆಯುವ ಹಾಗೂ ತೆರಿಗೆ ಪಾವತಿಸದೇ ಇರುವ ಆಸ್ತಿ ಮಾಲೀಕರ ಹೆಸರುಗಳನ್ನು ಮಾಧ್ಯಮಗಳಲ್ಲಿ ಪ್ರಕಟಿಸುವ ಅಭಿಯಾನ ಪಾಲಿಕೆ ಪ್ರಾರಂಭಿಸಿರುವ ಹಿನ್ನೆಲೆಯಲ್ಲಿ ಬಾಗಮನೆ ಟೆಕ್ ಪಾರ್ಕ್ ರವರು ಬಾಕಿ ಉಳಿಸಿಕೊಂಡಿರುವ 10 ಕೋಟಿ ರೂ.ಗಳನ್ನು ಪಾವತಿಸಿದ್ದಾರೆ.

ಆಸ್ತಿ ತೆರಿಗೆ ಬಾಕಿ ಉಳಿಸಿಕೊಂಡಿರುವ ಮಾಲೀಕರು ತೆರಿಗೆ ಪಾವತಿಸುವಲ್ಲಿ ಆಸಕ್ತಿ ತೋರಿಸುತ್ತಿರುವುದಾಗಿ ಕಂಡುಬಂದಿದೆ. ಪಾಲಿಕೆಯಿಂದ ನೋಟಿಸ್ ಜಾರಿ ಮಾಡುವ ಮತ್ತು ಕಟ್ಟಡಗಳ ಎದುರು ತಮಟೆ ಹೊಡೆಯುವ ಕಾರ್ಯಕ್ರಮ ಹಮ್ಮಿಕೊಳ್ಳುವ ಮುಂಚಿತವಾಗಿಯೇ ಆಸ್ತಿದಾರರು ತೆರಿಗೆ ಪಾವತಿಸುವಂತೆ ಪಾಲಿಕೆ ಆಯುಕ್ತರಾದ ಶ್ರೀ ಎಂ.ಕೆ. ಶಂಕರಲಿಂಗೇಗೌಡ ರವರು ಸಾರ್ವಜನಿಕರಲ್ಲಿ ಮನವಿ ಮಾಡಿದ್ದಾರೆ.

**ಸಾರ್ವಜನಿಕ ಸಂಪರ್ಕಾಧಿಕಾರಿ**